ನಡೆದುಕೊಂಡೇ ಹೋಗಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ಅವರು ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯ ? ಪ್ರತಿಯೊಬ್ಬ ಎ.ಇ.ಓ.ಗಳಿಗೂ ಒಂದೊಂದು ವಾಹನ ಕೊಟ್ಟರೆ ಸುಮಾರು 3.80 ಕೋಟಿ ರೂ. ಸರ್ಕಾರಕ್ಕೆ ಖರ್ಚು ಬರುತ್ತದೆ. ಈಗಿನ ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ ಇದು ಸ್ವಲ್ಪಮಟ್ಟಿಗೆ ಕಷ್ಟವಾಗಬಹುದು. ಆದ್ದರಿಂದ ನನ್ನ ಸಲಹೆ ಏನೆಂದರೆ, ಈಗ ಮೋಟಾರ್ ಸೈಕಲ್ ಬೆಲೆ ಕಡಿಮೆ ಇರುವುದರಿಂದ ಪ್ರತಿಯೊಬ್ಬ ಎ.ಇ.ಓ.ಗೂ ಒಂದೊಂದು ಮೋಟಾರ್ ಸೈಕಲನ್ನು ಕೊಟ್ಟರೆ ಅವರು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುತ್ತದೆಯೇ ಎಂದು ಕೇಳಬಯಸುತ್ತೇನೆ.

ಡಾ: ಹೆಚ್. ಡಿ. ಲಮಾಣಿ:– ಎ.ಇ.ಓ.ಗಳು ಬಹಳಷ್ಟು ಶಾಲೆಗಳಿಗೆ ಭೇಟಿ ಕೊಟ್ಟು ಇನ್‌ಸ್ಪೆಕ್ಷನ್ ಮಾಡಬೇಕಾಗುತ್ತದೆ. ಅವರಿಗೆ ಯಾವುದೇ ವಾಹನ ಸೌಕರ್ಯವೂ ಇಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆ.

ಮತ್ತೆ ಅವರಿಗೆ ನಾವು ತಿಂಗಳಿಗೆ 150 ಹಾಗೂ 50 ರೂಪಾಯಿಗಳ ಭತ್ಯೆ ಕೂಡ ಕೊಡುತ್ತಿದ್ದೇವೆ. ಇದೂ ಕೂಡ ಬಹಳ ಕಡಿಮೆ ಎನ್ನುವ ಕೂಗು ಇದೆ. ಇದನ್ನು ಹೆಚ್ಚು ಮಾಡುವ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಜೊತೆಗೆ ಮಲೆನಾಡು ಭಾಗದಲ್ಲಿ ಜೀಪ್‌ಗಳ ಅವಶ್ಯಕತೆ ಇದೆ. ಏಕೆಂದರೆ ಬಹಳ ದೂರ ದೂರದ ಹಳ್ಳಿಗಳಿಗೆ ಹೋಗಬೇಕಾಗಿರುವುದರಿಂದ, ರಿಮೋಟ್ ಹಳ್ಳಿಗಳಿಗೆ ಹೋಗಬೇಕಾಗಿರುವುದರಿಂದ ಮಳೆಗಾಲದಲ್ಲಿ ಬಹಳ ತೊಂದರೆ ಇದೆ. ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಿ ಏನಾದರೂ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮನೋಹರ ಯು. ಐನಾಪುರ:– ಅಧ್ಯಕ್ಷರೇ, ನನ್ನ ವಿನಂತಿ ಏನೆಂದರೆ, ಪ್ರಾಥಮಿಕ ಶಾಲಾ ಶಿಕ್ಷಕರು ಯಾವ ರೀತಿ ಕೆಲಸ ಮಾಡುತ್ತಾರೆ ಯಾವ ರೀತಿ ಚೆಕ್ ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಎ.ಇ.ಓ.ಗಳಿಗೆ ವೆಹಿಕಲ್ ಕೊಟ್ಟರೆ ಅವರು ತಪಾಸಣೆ ಕಾರ್ಯ ಚುರುಕಿನಿಂದ ಮಾಡುವುದರಿಂದ ಮಕ್ಕಳಿಗೂ ಒಳ್ಳೆಯ ವಿದ್ಯಾಭ್ಯಾಸ ಸಿಗುತ್ತದೆ. ಇವರಿಗೆ ಕನಿಷ್ಟ ಪಕ್ಷ ಮೋಟರ್ ಸೈಕಲ್‌ಗಳನ್ನು ಕೊಡುವುದು ಕಷ್ಟವೇನೂ ಅಲ್ಲ.

ಡಾ: ಹೆಚ್.ಡಿ. ಲಮಾಣಿ:– ಅಧ್ಯಕ್ಷರೇ, ಎಲ್ಲಾ 190 ಸಹಾಯಕ ಶಿಕ್ಷಣಾಧಿಕಾರಿಗಳಿಗೂ ಜೀಪ್ ಕೊಟ್ಟರೆ ಆರ್ಥಿಕ ಭಾರ ಎಷ್ಟು ಆಗುತ್ತದೆ ಎಂಬುದನ್ನೂ ನೋಡಬೇಕು.

ಶ್ರೀ ಮನೋಹರ ಯು. ಐನಾಪುರ:– ಮೋಟರ್ ಸೈಕಲ್ ಕೊಡಿ.

ಡಾ: ಹೆಚ್.ಡಿ. ಲಮಾಣಿ:– ಇದರ ಬಗ್ಗೆ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಮನೋಹರ ಯು. ಐನಾಪುರ:– ಪರಿಶೀಲನೆ ಬೇಡ.

ಶಿಕಾರಿಪುರ ನಗರ ಕಂಬೈನ್ಡ್ ಆಸ್ಪತ್ರೆಯಲ್ಲಿರುವ ವೈದ್ಯಾಧಿಕಾರಿಗಳ ಸಂಖ್ಯೆ

307 (110): ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ನಗರ ಕಂಬೈನ್ಡ್ ಆಸ್ಪತ್ರೆಯಲ್ಲಿರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು;

ಅ) ಹಾಲಿ ಮಂಜೂರಾಗಿರುವ ಇತರೆ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು;

ಆ) ಹಾಲಿ ಯಾರು ಯಾರು ಹುದ್ದೆಯಲ್ಲಿದ್ದಾರೆ;

ಇ) ಇಲ್ಲದಿದ್ದಲ್ಲಿ ಎಷ್ಟು ವರ್ಷಗಳಿಂದ ಇಲ್ಲ ಹಾಗೂ ಯಾವಾಗ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ಮಂಜೂರಾದ ಹುದ್ದೆಗಳು		ಕೆಲಸ ಮಾಡುತ್ತಿರುವ ವೈದ್ಯರ ಸಂಖ್ಯೆ
1) ಉಪ ಶಸ್ತ್ರ ಚಿಕಿತ್ಸಕರು	– 1	ಇಲ್ಲ
2) ಸಹಾಯಕ ಶಸ್ತ್ರ ಚಿಕಿತ್ಸಕರುಗಳು	– 2	ಇಲ್ಲ
3) ಸಹಾಯಕ ದಂತ ಚಿಕಿತ್ಸಕರು	– 1	ಇಲ್ಲ

ಆದರೆ ಸದ್ಯಕ್ಕೆ ಒಬ್ಬ ರಜಾ ಮೀಸಲಾತಿ ವೈದ್ಯಾಧಿಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆ) 39

ಇ) ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಲಾಗಿದೆ.

ಈ) ಹುದ್ದೆಗಳ ವಿವರ	ಯಿಂದಿನಿಂದ ಖಾಲಿ ಇದೆ
1) ಉಪಶಸ್ತ್ರ ಚಿಕಿತ್ಸಕರು	25-3-1991
2) ಸಹಾಯಕ ಶಸ್ತ್ರ ಚಿಕಿತ್ಸಕರು (ಪುರುಷ)	21-7-1992
3) ಸಹಾಯಕ ಶಸ್ತ್ರ ಚಿಕಿತ್ಸಕರು (ಮಹಿಳಾ)	12-8-1992
4) ಸಹಾಯಕ ದಂತ ವೈದ್ಯರು	ಜುಲೈ 86 ರಿಂದ

ಸಹಾಯಕ ಶಸ್ತ್ರಚಿಕಿತ್ಸಕರುಗಳಿಗೆ ಉಪಶಸ್ತ್ರ ಚಿಕಿತ್ಸಕರನ್ನಾಗಿ ಭರ್ತಿ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಬಗ್ಗೆ ತೀರ್ಮಾನ ಕೈಗೊಂಡನಂತರ ಖಾಲಿ ಇರುವ ಉಪಶಸ್ತ್ರ ಚಿಕಿತ್ಸಕರ ಹುದ್ದೆಯನ್ನು ಭರ್ತಿ ಮಾಡಲಾಗುವುದು. ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿದ ಸಹಾಯಕ ಶಸ್ತ್ರ ಚಿಕಿತ್ಸಕರುಗಳು ತಮ್ಮ ವ್ಯಾಸಂಗವನ್ನು ಈ ತಿಂಗಳ ಅಂತ್ಯದಲ್ಲಿ ಪೂರೈಸಿ ವಾಪಸ್ ಬರುವವರಿದ್ದು ಅವರುಗಳಿಗೆ ನೇಮಕಾತಿ ಆದೇಶವನ್ನು ನೀಡುವಾಗ ಶಿಕಾರಿಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು.

ಖಾಲಿ ಇರುವ ಸಹಾಯಕ ದಂತ ಚಿಕಿತ್ಸಕರುಗಳ ಹುದ್ದೆಯನ್ನು 1 ತಿಂಗಳೊಳಗಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – 1

ಕ್ರ. ಸಂ.	ಹುದ್ದೆಗಳ ವಿವರ	ಮಂಜೂರಾದ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವವರು	ಖಾಲಿ ಇರುವ ಹುದ್ದೆಗಳು	ಷರಾ
1.	ಉಪ ಶಸ್ತ್ರ ಚಿಕಿತ್ಸಕರು	1	–	೧ (ಸ್ತ್ರೀರೋಗ ತಜ್ಞರು)	ಮಂಜೂರಾದ ದಿನ 25-3-91 ಅಂದಿನಿಂದಲೂ ಖಾಲಿ ಇರುತ್ತದೆ.
2.	ಸಹಾಯಕ ಶಸ್ತ್ರಚಿಕಿತ್ಸಕರು	2	–	2	೧ ಮಹಿಳಾ ವೈದ್ಯರ ಹುದ್ದೆ. ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿದ ಕಾರಣ ದಿ:12-3-92ರಿಂದ ಖಾಲಿ ಇರುತ್ತದೆ. ಮತ್ತೊಂದು ಹುದ್ದೆಯಲ್ಲಿ ರಜೆ ಮೀಸಲು ಹುದ್ದೆಯವರಾದ ಡಾ: ಎಂ.ಸಿ. ಹುಲ್ಲುಮನಿ ಇವರು 21–7–92 ರಿಂದ ಕೆಲಸ ಮಾಡುತ್ತಿದ್ದಾರೆ.
3.	ಸಹಾಯಕ ದಂತ ವೈದ್ಯರು	1	–	1	ಜುಲೈ 1986ರಿಂದ ಹುದ್ದೆ ಖಾಲಿ ಇರುತ್ತದೆ.
4.	ಪ್ರಥಮ ದರ್ಜೆ ಸಹಾಯಕ	1	1	–	ಶ್ರೀಮತಿ ಚೂಡಾಮಣಿ
5.	ದ್ವಿತೀಯ ದರ್ಜೆ ಸಹಾಯಕ (ಪು)	1	1	–	ಶ್ರೀ ಚನ್ನಬಸಪ್ಪ
6.	ಕಿರಿಯ ಆರೋಗ್ಯ ಸಹಾಯಕ (ಪು)	2	2	–	ಶ್ರೀ ಸೀತಾಮಪ್ಪ, ಶ್ರೀ ದೇವನಾರಾಯಂ ಬಿ.
7.	ಫಾರ್ಮಾ ಮೆಡಿಕಲ್ ವರ್ಕರ್	1	1	–	ಶ್ರೀ ಕೆ.ಎಸ್. ಗುರುರಾಜ್
8.	ಪ್ರಯೋಗ ಶಾಲಾ ತಂತ್ರಜ್ಞ	2	1	1	ಶ್ರೀ ಬಿ.ಹೆಚ್. ಚೆನ್ನಬಸವಯ್ಯ
9.	ಔಷಧಿ ವಿತರಕರು	2	2	–	ಶ್ರೀ ಕೆ. ಸಿದ್ದಪ್ಪ ಶ್ರೀ ಕೆ. ಸೋಮಶೇಖರ್
10.	ಹಿರಿಯ ಆರೋಗ್ಯ ಸಹಾಯಕ (ಪು)		1	1	ಶ್ರೀ ಕೆ.ಎಂ. ರುದ್ರಪ್ಪ
11.	ಕಿರಿಯ ಆರೋಗ್ಯ ಸಹಾಯಕ (ಮ)	5	5	–	ಶ್ರೀಮತಿ ಬಾಲಚಂದ್ರಿಕಾ, ಶ್ರೀಮತಿ ಸಾವಿತ್ರಮ್ಮ ಶ್ರೀಮತಿ ಪಿ. ಚಂದ್ರಮ್ಮ ಶ್ರೀಮತಿ ಮಲ್ಲಮ್ಮ

12. ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	1	–	1	ಶ್ರೀಮತಿ ಯಶೋದಮ್ಮ
13. ಕ್ಷ–ಕಿರಣ ತಂತ್ರಜ್ಞ	1	1	–	ಶ್ರೀ ಟಿ.ಎಸ್. ರಮಣಬಾಬು
14. ಶುಶ್ರೂಷಕ ದಾದಿಯರು	3	2	1	ಶ್ರೀಮತಿ ನಾಗಮಣಿ ಬಳ್ಳಾರಿ, ಶ್ರೀಮತಿ ಸುಮಿತ್ರಮ್ಮ
15. ಓ.ಟಿ. ಸಹಾಯಕರು	1	–	1	
16. ಗ್ರೂಪ್ ಡಿ ಸಹಾಯಕರು	18	12	6	ಶ್ರೀ ರಾಮಚಂದ್ರಪ್ಪ, ಶ್ರೀ ಮಹದೇವಪ್ಪ ಶ್ರೀ ಎಸ್. ರಾಮಪ್ಪ, ಶ್ರೀ ಎಂ.ಕೆ. ದೇವಪ್ಪ, ಶ್ರೀ ಬಿ. ಕಾಲಯ್ಯ, ಶ್ರೀ ಪರಶುರಾಂ, ಶ್ರೀ ಎ.ಎಸ್. ಮಾಧು ಶ್ರೀ ಮಲ್ಲಿಕಾರ್ಜುನ ಶ್ರೀ ವೀರಭದ್ರಾಚಾರ್ ಶ್ರೀಮತಿ ಶಾಂತಮ್ಮ ಶ್ರೀಮತಿ ಅಂಕಮ್ಮ

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಶಿಕಾರಿಪುರ ನಗರದ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆ ಮಾಡಬೇಕೆಂದು 10–12 ಲಕ್ಷ ರೂಪಾಯಿ ಖರ್ಚು ಮಾಡಿ ಬಿಲ್ಡಿಂಗ್ ಕಟ್ಟಿ 4 ವರ್ಷ ಆಯಿತು. ಈ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆ ಆಗಿ ಯಾವಾಗ ಪರಿವರ್ತನೆ ಮಾಡುತ್ತೀರಿ ? ಇದು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ? ಇಡೀ ರಾಜ್ಯದಲ್ಲಿ ಯಾವುದಾದರೂ ಒಂದು ತಾಲ್ಲೂಕು ಕೇಂದ್ರದಲ್ಲಿ ಯಾವುದೇ ವೈದ್ಯಾಧಿಕಾರಿ ಇಲ್ಲದೇ ಇರುವ ಇನ್ನು ಯಾವುದಾದರೂ ಉದಾಹರಣೆ ಇದೆಯೇ ? ಹಾಗೂ ಹಾಲಿ ಖಾಲಿ ಇರುವ ಹುದ್ದೆಗಳನ್ನು ನಿರ್ದಿಷ್ಟವಾಗಿ ಇನ್ನು ಒಂದು ವಾರ ಅಥವಾ 15 ದಿವಸಗಳಲ್ಲಿ ಭರ್ತಿ ಮಾಡುತ್ತೀರಾ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ, ಇಲ್ಲಿ 3 ವೈದ್ಯರ ಜಾಗ ಖಾಲಿ ಇವೆ. ಆದರೆ ಒಬ್ಬರು ಆನ್ ಲೀವ್, ರಿಸರ್ವ್ ಡಾಕ್ಟರ್ ನೇಮಕ ಮಾಡಿದ್ದೇವೆ. ಅದೇ ಪ್ರಕಾರ ಒಂಡಿಯಲ್ಲಿ ಇನ್ನೊಬ್ಬರನ್ನು ಕಳುಹಿಸಿದ್ದಾರೆಂದು ಮಾಹಿತಿ ಬಂದಿದೆ. ಅದನ್ನು ಈ ತಿಂಗಳ ಒಳಗೆ ಡಾಕ್ಟರ್‌ಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನನ್ನ ಮೊದಲ ಪ್ರಶ್ನೆ, ಜನರಲ್ ಆಸ್ಪತ್ರೆ ಮಾಡುವ ಬಗ್ಗೆ ಸರ್ಕಾರ ಏನೂ ಹೇಳಿಲ್ಲ. ಅಲ್ಲಿ ಬಿಲ್ಡಿಂಗ್ ಆಗಿದೆ. ಸರ್ಕಾರದ ಪಾಲಿಸಿ ಇದರ ಬಗ್ಗೆ ಏನು ? ಒಬ್ಬ ಡಾಕ್ಟರನ್ನು ರಿಲೀವ್ ಮಾಡುವುದಕ್ಕಿಂತ ಮುಂಚೆ ಇನ್ನೊಬ್ಬ ಡಾಕ್ಟರ್ ಹೋಗಿ ರಿಪೋರ್ಟ್ ಮಾಡಿಕೊಂಡ ಮೇಲೆ ರಿಲೀವ್ ಮಾಡಬೇಕಲ್ಲವೇ ? ನಾನು ಇಂತಹ ಡಾಕ್ಟರೇ ಬೇಕು ಎಂದೇನೂ ಕೇಳಿಲ್ಲ. ಕೊನೆಯ ಪಕ್ಷ ತಾಲ್ಲೂಕು ಕೇಂದ್ರಗಳಲ್ಲಿಯಾದರೂ ಇನ್ನೊಬ್ಬ ಡಾಕ್ಟರ್ ರಿಪೋರ್ಟ್

ಮಾಡಿಕೊಳ್ಳದ ಮೊದಲು ಇರುವ ಡಾಕ್ಟರುಗಳನ್ನು ರಿಲೀವ್ ಮಾಡಬಾರದು ಎನ್ನುವ ಬಗ್ಗೆ ಸರ್ಕಾರ ಪಾಲಿಸಿ ಡಿಸಿಷನ್ ತೆಗೆದುಕೊಳ್ಳುತ್ತದೆಯೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ಶಿಕಾರಿಪುರ ಆಸ್ಪತ್ರೆಯನ್ನು 100 ಹಾಸಿಗೆ ಆಸ್ಪತ್ರೆಯಾಗಿ ಪರಿವರ್ತನೆ ಮಾಡುವುದಕ್ಕೆ ಈಗ ತಾನೇ ನಮ್ಮ ಸರ್ಕಾರದ ಮುಂದೆ ಅದು ಇದೆ, ಅದನ್ನು ಬೇಗನೆ ಮಾಡುತ್ತೇವೆ. ಮತ್ತೆ ಸದಸ್ಯರು ಒಂದು ಸಲಹೆ ಕೊಟ್ಟಿದ್ದಾರೆ. ಒಬ್ಬರು ಡಾಕ್ಟರನ್ನು ರಿಲೀವ್ ಮಾಡುವುದಕ್ಕೆ ಮುಂಚೆ ಇನ್ನೊಬ್ಬರು ಡಾಕ್ಟರು ಅಲ್ಲಿ ರಿಪೋರ್ಟ್ ಮಾಡಿಕೊಂಡಿರಬೇಕೆಂದು ಹೇಳಿದ್ದಾರೆ. ಅದು ಬಹಳ ಒಳ್ಳೆಯ ಸಲಹೆ. ಇದನ್ನು ನಾವು ಗಮನಿಸಿ ಅದನ್ನು ಪಾಲನೆ ಮಾಡುವುದಕ್ಕೆ ನೋಡುತ್ತೇವೆ.

ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ಸೆನೆಟ್ – ಸಿಂಡಿಕೇಟ್‌ಗೆ ನಾಮ ನಿರ್ದೇಶನಗಳು

308 (1598): ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):–

ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿಯನ್ನು ರಾಜ್ಯದ ವಿಶ್ವವಿದ್ಯಾಲಯಗಳ ಸೆನೆಟ್, ಸಿಂಡಿಕೇಟ್ ಮತ್ತು ಇತರೆ ನಿಕಾಯಗಳಲ್ಲಿ ಪ್ರತಿನಿಧಿಸುವ ಸಲುವಾಗಿ ವಿಶ್ವವಿದ್ಯಾಲಯದ ಆಡಳಿತ ವರ್ಗದ ಶಿಫಾರಸ್ಸಿನ ಮೇಲೆ ಅಲ್ಲಿನ ಸಿಬ್ಬಂದಿ ವರ್ಗದಿಂದ ಕೆಲವು ನೇಮಕಾತಿಗಳನ್ನು ಮಾಡುತ್ತಿರುವುದು ನಿಜ ಅಲ್ಲ ಅಲ್ಲವೆ ?

ಆ) ಈ ದಿಸೆಯಲ್ಲಿ ಸರ್ಕಾರವು ಸೂಕ್ತ ತಿದ್ದುಪಡಿಗಳನ್ನು ಮಾಡುವುದೆ ? ಹಾಗಿದ್ದಲ್ಲಿ ಸರ್ಕಾರವು ಅನುಭವಸ್ಥ ಮತ್ತು ವಿದ್ಯಾವಂತ ಪರಿಶಿಷ್ಟ ಜಾತಿಯ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವುದೇ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):–

ಅ) ವಿಶ್ವವಿದ್ಯಾಲಯಗಳ ಸೆನೆಟ್, ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿಗಳಿಗೆ ಅಲ್ಲಿನ ಸಿಬ್ಬಂದಿ ಅಥವಾ ಇತರರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 1976ರ ಉಪಬಂಧಗಳ ಪ್ರಕಾರ ನೇಮಕ ಮಾಡಲಾಗುವುದು.

ಆ) ಇಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 1976ರ ಪ್ರಸ್ತುತ ಇರುವ ಅನುಬಂಧಗಳಲ್ಲಿ ಪರಿಶಿಷ್ಟ ಜಾತಿಯ ಸದಸ್ಯರನ್ನು ವಿಶ್ವವಿದ್ಯಾಲಯಗಳ ನಿಕಾಯಗಳಿಗೆ ನೇಮಕ ಮಾಡಲು ಸಾಕಷ್ಟು ಅವಕಾಶವಿರುತ್ತದೆ.

ಶ್ರೀ ಕೆ. ಸಿದ್ದಯ್ಯ:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಪ್ರಸ್ತುತ ಇರುವ ಅನುಬಂಧದಲ್ಲಿ ಪರಿಶಿಷ್ಟ ಜಾತಿಯ ಸದಸ್ಯರನ್ನು ವಿಶ್ವವಿದ್ಯಾಲಯಗಳ ಬಾಡಿಗಳಿಗೆ ನೇಮಕ ಮಾಡಲು ಸಾಕಷ್ಟು ಅವಕಾಶ ಇದೆ ಎಂದು ಹೇಳಿದ್ದಾರೆ. ಈ ಅವಕಾಶ ಇದೆ ಎಂದು ನನಗೂ ಗೊತ್ತು. ಆದರೆ ನಾನು ಕೇಳುವುದು ಇಷ್ಟೇ. ಈ ಸಂಸ್ಥೆಗಳಿಗೆ, ಸಿಂಡಿಕೇಟ್ ಮಗ್ಗೆರೆಗಳಿಗೆ ವಿದ್ಯಾವಂತ ಪರಿಶಿಷ್ಟ ಜಾತಿಯ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ:– ಮಾನ್ಯ ಸದಸ್ಯರು ಯಾವ ವಿಚಾರ ಹೇಳುತ್ತಿದ್ದಾರೆ, ಅಧಿಕಾರದವರು ಸ್ಟ್ಯಾಫ್ ಮೆಂಬರ್ಸ್ ಇರಬಾರದೆಂದು, ನಮ್ಮ ಸರ್ಕಾರದ ನೀತಿ ಸಹ ಅದು ಆಗಿದೆ. ಸಿಂಡಿಕೇಟ್‌ನಲ್ಲಿ